# ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು 560012

## SC/ST/OBC-NCL/EWS/PWD ವರ್ಗಗಳಿಗಾಗಿ ವಿಶೇಷ ನೇಮಕಾತಿ

**10 ಜುಲೈ 2025**

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc) ಸಂಸ್ಥೆಯು S**C/ST/OBC-NCL/EWS ಗಾಗಿ ವಿಶೇಷ ನೇಮಕಾತಿ ಅಡಿಯಲ್ಲಿ** ತನ್ನ ವಿವಿಧ ಶೈಕ್ಷಣಿಕ ವಿಭಾಗಗಳು ಮತ್ತು ಕೇಂದ್ರಗಳಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗಾಗಿ ಉನ್ನತ ಗುಣಮಟ್ಟದ ಸಂಶೋಧನೆಯಲ್ಲಿ ದಾಖಲೆಯನ್ನು ಹೊಂದಿರುವ ಮತ್ತು ಸಂಶೋಧನೆ ಹಾಗು ಬೋಧನೆಗಾಗಿ ಬಲವಾದ ಬದ್ಧತೆಯನ್ನು ಹೊಂದಿರುವ ಅಸಾಧಾರಣ ಹಾಗು ಪ್ರಕಾಶಮಾನವಾದ ಪ್ರೇರಿತ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ಅರ್ಜಿಗಳನ್ನು ಆನ್‌ಲೈನ್ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ:
https://recruitment.iisc.ac.in/SpecialDrive/

ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 10.09.2025

## ಮೀಸಲಾತಿ

ಭಾರತ ಸರ್ಕಾರದ (GoI) ನಿಯಮಗಳ ಪ್ರಕಾರ, ಅಗತ್ಯ ಪ್ರಮಾಣಪತ್ರಗಳನ್ನು ಅರ್ಜಿ ನಮೂನೆಯೊಂದಿಗೆ ಲಗತ್ತಿಸಬೇಕು.

## ವಿಭಾಗಗಳು

ಅರ್ಜಿದಾರರು, ಅಪ್ಲಿಕೇಶನ್ ಪೋರ್ಟಲ್‌ನಲ್ಲಿ ಕೆಳಗೆ ಪಟ್ಟಿ ಮಾಡಲಾದ ವಿಭಾಗಗಳಲ್ಲಿ ಮೂರು ವಿಭಾಗಗಳು/ಕೇಂದ್ರಗಳನ್ನು ಸೂಚಿಸಬಹುದು. ಅರ್ಜಿದಾರರು ತಮ್ಮ ವಿಭಾಗಗಳನ್ನು ಆಯ್ಕೆ ಮಾಡುವ ಮೊದಲು ಎಲ್ಲಾ ವಿಭಾಗಗಳ ವೆಬ್‌ಪೇಜ್‌ಗಳನ್ನು ನೋಡಬೇಕು. ಪ್ರತಿ ಅರ್ಜಿದಾರರಿಗೆ "ಪ್ರಕ್ರಿಯೆಯಲ್ಲಿದೆ" ಎಂಬ ಅಡಿಯಲ್ಲಿ ಕೇವಲ ಒಂದು ಅರ್ಜಿಯನ್ನು ಸಲ್ಲಿಸಲು ಅನುಮತಿಸಲಾಗಿದೆ.
**ಜೈವಿಕ ವಿಜ್ಞಾನಗಳು:** ಜೀವರಸಾಯನಶಾಸ್ತ್ರ (BC); ಪರಿಸರ ವಿಜ್ಞಾನ ಕೇಂದ್ರ (CES); ನರವಿಜ್ಞಾನ ಕೇಂದ್ರ (CNS); ಮೈಕ್ರೋಬಯಾಲಜಿ ಮತ್ತು ಸೆಲ್ ಬಯಾಲಜಿ (MCB); ಆಣ್ವಿಕ ಜೈವಿಕ ಭೌತಶಾಸ್ತ್ರ ಘಟಕ (MBU); ಅಭಿವೃದ್ಧಿ ಜೀವಶಾಸ್ತ್ರ ಮತ್ತು ತಳಿಶಾಸ್ತ್ರ (DBG).

**ರಾಸಾಯನಿಕ ವಿಜ್ಞಾನಗಳು:** ಅಜೈವಿಕ ಮತ್ತು ಭೌತಿಕ ರಸಾಯನಶಾಸ್ತ್ರ (IPC); ಮೆಟೀರಿಯಲ್ಸ್ ರೀಸರ್ಚ್ ಸೆಂಟರ್ (MRC); ಸಾವಯವ ರಸಾಯನಶಾಸ್ತ್ರ (OC); ಘನಸ್ಥಿತಿ ಮತ್ತು ರಚನಾ ರಸಾಯನ ವಿಜ್ಞಾನ ಘಟಕ (SSCU).

**ಭೌತಿಕ ಮತ್ತು ಗಣಿತ ವಿಜ್ಞಾನಗಳು:** ಅಧಿಕ ಶಕ್ತಿ ಭೌತಶಾಸ್ತ್ರ ಕೇಂದ್ರ (CHEP); ಇನ್ಸ್ಟ್ರುಮೆಂಟೇಶನ್ ಮತ್ತು ಅಪ್ಲೈಡ್ ಫಿಸಿಕ್ಸ್ (IAP); ಗಣಿತಶಾಸ್ತ್ರ; ಭೌತಶಾಸ್ತ್ರ.

**ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ವಿಜ್ಞಾನಗಳು (EECS):** ಕಂಪ್ಯೂಟರ್ ವಿಜ್ಞಾನ ಮತ್ತು ಆಟೊಮೇಷನ್ (CSA); ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ಎಂಜಿನಿಯರಿಂಗ್ (ECE); ಎಲೆಕ್ಟ್ರಿಕಲ್ ಎಂಜಿನಿಯರಿಂಗ್ (EE); ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಎಂಜಿನಿಯರಿಂಗ್ (ESE).

**ಮೆಕ್ಯಾನಿಕಲ್ ವಿಜ್ಞಾನಗಳು**: ಅಂತರಿಕ್ಷಯಾನ ಎಂಜಿನಿಯರಿಂಗ್ (AE); ವಾತಾವರಣ ಮತ್ತು ಸಾಗರ ವಿಜ್ಞಾನಗಳ ಕೇಂದ್ರ (CAOS); ಭೂ ವಿಜ್ಞಾನ ಕೇಂದ್ರ (CEaS); ವಿನ್ಯಾಸ ಮತ್ತು ಉತ್ಪಾದನೆ (DM); ಸುಸ್ಥಿರ ತಂತ್ರಜ್ಞಾನಗಳ ಕೇಂದ್ರ (CST); ರಾಸಾಯನಿಕ ಎಂಜಿನಿಯರಿಂಗ್* (CE); ಸಿವಿಲ್ ಎಂಜಿನಿಯರಿಂಗ್ (CiE); ಮೆಟೀರಿಯಲ್ಸ್ ಎಂಜಿನಿಯರಿಂಗ್ (MT); ಯಾಂತ್ರಿಕ ಎಂಜಿನಿಯರಿಂಗ್ (ME).

**ಅಂತರಶಿಕ್ಷಣ ಅಧ್ಯಯನ ವಿಜ್ಞಾನಗಳು:** ಬಯೋ ಎಂಜಿನಿಯರಿಂಗ್ (BE); ನ್ಯಾನೊ ವಿಜ್ಞಾನ ಮತ್ತು ಎಂಜಿನಿಯರಿಂಗ್ ಕೇಂದ್ರ (CeNSE); ಗಣಕಯಂತ್ರೀಯ ಮತ್ತು ದತ್ತಾಂಶ ವಿಜ್ಞಾನ ವಿಭಾಗ (CDS); ನಿರ್ವಹಣಾ ಅಧ್ಯಯನ ಕೇಂದ್ರ (MS); ರಾಬರ್ಟ್ ಬಾಷ್ ಸೆಂಟರ್ ಫಾರ್ ಸೈಬರ್ ಫಿಸಿಕಲ್ ಸಿಸ್ಟಮ್ಸ್ (RBCCPS). ಶಕ್ತಿ ಸಂಶೋಧನಾ ಅಂತರಶಿಕ್ಷಣ ಅಧ್ಯಯನ ಕೇಂದ್ರ (ICER).

ಕೆಳಗೆ ಸೂಚಿಸಿರುವ ಅಂತರಶಿಕ್ಷಣ ಅಧ್ಯಯನ ಕೇಂದ್ರಗಳು ಅಧ್ಯಾಪಕರುಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳುವುದಿಲ್ಲ. ಯಾವುದಾದರು ಒಂದು ಕೇಂದ್ರದಲ್ಲಿ ಸಂಯೋಜನೆ ಹೊಂದಲು ಆಸಕ್ತಿ ಇರುವ ಅರ್ಜಿದಾರರು ಮೇಲೆ ಪಟ್ಟಿ ಮಾಡಲಾದ ಒಂದು ವಿಭಾಗ/ ಕೇಂದ್ರಗಳಲ್ಲಿ ಅಧ್ಯಾಪಕರಾಗಿ ನೇಮಕಗೊಳ್ಳಬೇಕು. ಅರ್ಜಿದಾರರು ತಮ್ಮ ಸಂಶೋಧನಾ ಆಸಕ್ತಿಯು ಬೇರೆ ವಿಭಾಗಗಳೊಂದಿಗೆ ಹೊಂದುವಂತಿದ್ದರೆ ಅಪ್ಲಿಕೇಶನ್ ಪೋರ್ಟಲ್‌ನಲ್ಲಿ ಅವರ ಮೂರು ಆಯ್ಕೆಗಳ ವಿರುದ್ಧ ಕೆಳಗಿನ ಒಂದು ಅಥವಾ ಹೆಚ್ಚಿನ ಕೇಂದ್ರಗಳನ್ನು ಪಟ್ಟಿ ಮಾಡಬಹುದು. ಅರ್ಜಿದಾರರು ಆಯ್ಕೆ ಮಾಡುವ ಅಂತರಶಿಕ್ಷಣ ಅಧ್ಯಯನ ಕೇಂದ್ರಗಳು ಅರ್ಜಿ ನಮೂನೆಯನ್ನು ಮೌಲ್ಯಮಾಪನ ಮಾಡಲು ಸಹಾಯವಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳನ್ನು ಮೇಲೆ ಪಟ್ಟಿ ಮಾಡಲಾದ ಒಂದು ವಿಭಾಗಗಳು/ಕೇಂದ್ರಗಳೊಂದರಲ್ಲಿ ಬೋಧಕವರ್ಗದ ಸದಸ್ಯರಾಗಿ (ಅರ್ಜಿದಾರರೊಂದಿಗೆ ಸಮಾಲೋಚಿಸಿ) ಮತ್ತು ಅಂತರಶಿಕ್ಷಣ ಅಧ್ಯಯನ ಕೇಂದ್ರದಲ್ಲಿ ಅವರು ಆಯ್ಕೆ ಮಾಡಿದ ಆಸಕ್ತಿಯ ಕೇಂದ್ರದಲ್ಲಿ ಜಂಟಿ ಬೋಧಕವರ್ಗದ ಸದಸ್ಯರಾಗಿ ನಿಯೋಜಿಸಲಾಗುತ್ತದೆ.

**ಅಂತರಶಿಕ್ಷಣ ಅಧ್ಯಯನ ಕೇಂದ್ರಗಳು**: ಮೂಲ ಸೌಕರ್ಯ, ಸಮರ್ಪಕ ಸಾಗಣೆ ಮತ್ತು ನಗರ ಯೋಜನಾ ಕೇಂದ್ರ (CiSTUP); ದಿವೇಚಾ ಹವಾಮಾನ ಬದಲಾವಣೆ ಅಧ್ಯಯನ ಕೇಂದ್ರ (DCCC); ಜಲ ಸಂಶೋಧನಾ ಅಂತರಶಿಕ್ಷಣ ಅಧ್ಯಯನ ಕೇಂದ್ರ (ICWaR).

ವಿವಿಧ ವಿಭಾಗಗಳು ಮತ್ತು ಅಂತರಶಿಕ್ಷಣ ಅಧ್ಯಯನ ಕೇಂದ್ರಗಳು, ಅಧ್ಯಾಪಕರುಗಳ ಸಂಕ್ಷಿಪ್ತ ವಿವರಗಳು, ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಸಂಶೋಧನಾ ಕ್ಷೇತ್ರಗಳ ಕುರಿತಾದ ಹೆಚ್ಚಿನ ಮಾಹಿತಿಯು ಆಯಾ ವಿಭಾಗಗಳ ವೆಬ್‌ಸೈಟ್‌ಗಳಲ್ಲಿ ಮತ್ತು (www.iisc.ac.in)ನಲ್ಲಿ ಲಭ್ಯವಿದೆ.

## ಅರ್ಹತೆ ಮತ್ತು ಅನುಭವದ ಅಗತ್ಯ

ಪಿಎಚ್‌ಡಿ.ಯಲ್ಲಿ ಪ್ರಥಮ ದರ್ಜೆ ಅಥವಾ ಹಿಂದಿನ ಪದವಿಯಲ್ಲಿ (ಗ್ರೇಡ್‌ಗಳು, ಇತ್ಯಾದಿ ವಿಷಯದಲ್ಲಿ) ಸಮಾನ ದರ್ಜೆ ಮತ್ತು ಉದ್ದಕ್ಕೂ ಉತ್ತಮ ಶೈಕ್ಷಣಿಕ ದಾಖಲೆ.
ಪಿಎಚ್‌ಡಿ. ಮಾಡುವಾಗ ಪಡೆದಿರುವ ಅನುಭವವನ್ನು ಹೊರತುಪಡಿಸಿ, ಕನಿಷ್ಠ ಮೂರು ವರ್ಷದ ಬೋಧನೆ/ ಸಂಶೋಧನೆ/ ವೃತ್ತಿಪರ ಅನುಭವ. ಇದರ ಹೊರತಾಗಿ, ವಿಶೇಷ ಪ್ರಕರಣದಲ್ಲಿ ಕಡಿಮೆ ಅನುಭವವನ್ನು ಹೊಂದಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು ಮತ್ತು ಅವರ ಅನುಭವಕ್ಕೆ ತಕ್ಕಂತೆ ವೇತನವನ್ನು ನಿಗದಿಪಡಿಸಲಾಗುವುದು.

**ವೇತನ:** 12 ನೇ ಹಂತದಲ್ಲಿ ರೂ.  1,01,500/-ಮೂಲ ವೇತನ. 12 ನೇ ಹಂತದಲ್ಲಿ ಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ 13A1 ಹಂತದಲ್ಲಿ ರೂ 1,31,400/- ಮೂಲ ವೇತನವನ್ನು ನಿಗದಿಪಡಿಸಲಾಗುತ್ತದೆ.

**ಒಟ್ಟು ಕನಿಷ್ಠ ವೇತನ (ತುಟ್ಟಿಭತ್ಯೆ ಮತ್ತು ಸಾರಿಗೆಭತ್ಯೆಯನ್ನು  ಒಳಗೊಂಡು):** ಮನೆ ಬಾಡಿಗೆ ಭತ್ಯೆಯೊಂದಿಗೆ ತಿಂಗಳಿಗೆ ₹ 1,98,935 ಮತ್ತು ಕ್ಯಾಂಪಸ್‌ನಲ್ಲಿ ವಾಸವಿದ್ದರೆ ತಿಂಗಳಿಗೆ ₹ 1,68,485.

## ಹೊಸ ಭೋಧಕ ಸದಸ್ಯರಿಗೆ ವಿಶೇಷ ಯೋಜನೆಗಳು

ಐಐಎಸ್‌ಸಿಯು ತನ್ನ ಹೊಸ ಅಧ್ಯಾಪಕ ಸದಸ್ಯರ ವೃತ್ತಿಪರ ಮತ್ತು ವೈಯಕ್ತಿಕ ಅಭಿವೃದ್ಧಿಗಾಗಿ ಹಲವಾರು ಆಕರ್ಷಕ ಪ್ರೋತ್ಸಾಹಗಳನ್ನು ನೀಡುತ್ತದೆ. ಇವುಗಳೆಂದರೆ:

- ಹೊಸ ಅಧ್ಯಾಪಕ ಸದಸ್ಯರು ತಮ್ಮ ಸಂಶೋಧನೆಯನ್ನು ಸಾಧ್ಯವಾದಷ್ಟು ತ್ವರಿತವಾಗಿ ಪ್ರಾರಂಭಿಸಲು, ಸಂಶೋಧನೆಗೆ ಅಗತ್ಯವಿರುವ ಅನುದಾನವನ್ನು ಅವರು ಸೇರ್ಪಡೆಗೊಂಡ ತಕ್ಷಣವೇ  ಒದಗಿಸಲಾಗುತ್ತದೆ. ಕಛೇರಿ ಮತ್ತು ಪ್ರಯೋಗಾಲಯದ ಮೂಲ ಪೀಠೋಪಕರಣಗಳು ಮತ್ತು ಅಗತ್ಯ ಕಂಪ್ಯೂಟಿಂಗ್ ಉಪಕರಣಗಳಿಗೆ ಆರಂಭಿಕ ಅನುದಾನವನ್ನು ನಿಯತವಾಗಿ ಒದಗಿಸಲಾಗುತ್ತದೆ. ಹೊಸ ಅಧ್ಯಾಪಕ ಸದಸ್ಯರು ತಮ್ಮ ಸಂಶೋಧನೆಯನ್ನು ಸ್ಥಿರವಾಗಿಸಿಕೊಳ್ಳಲು ಅನುಕೂಲವಾಗುವಂತೆ ಕೆಲವು ವರ್ಷಗಳವರೆಗೆ ಅವರಿಗೆ ಅಗತ್ಯವಿರುವ ಉಪಕರಣಗಳಿಗಾಗಿ ಗಣನೀಯ ಅನುದಾನವನ್ನು ಸಹ ಒದಗಿಸಲಾಗುತ್ತದೆ. ಈ ಸಮಯದಲ್ಲಿ ಅಧ್ಯಾಪಕ ಸದಸ್ಯರು ತಮ್ಮ ಸಂಶೋಧನೆಯನ್ನು ಮುಂದುವರಿಸಲು ವಿವಿಧ ಅನುದಾನಗಳ ಮೂಲಕ ಹಣವನ್ನು ಸಂಗ್ರಹಿಸಬೇಕೆಂಬ ನಿರೀಕ್ಷೆಯಿದೆ.
- ಹೊಸ ಅಧ್ಯಾಪಕರುಗಳಿಗೆ ಅನುದಾನದ ಅಗತ್ಯವಿದ್ದಲ್ಲಿ ಅವರು ಸಮಿತಿಯ ಮುಂದೆ ಸಲ್ಲಿಸುವ ಪ್ರಸ್ತಾವನೆ ಮತ್ತು ಪ್ರಸ್ತುತಿಯನ್ನು ಆಧರಿಸಿ ಪ್ರಾರಂಭಿಕ ಅನುದಾನವನ್ನು ಒದಗಿಸಲಾಗುತ್ತದೆ. ಮೊದಲ ವರ್ಷದ ಪ್ರಸ್ತಾವನೆಯಲ್ಲಿ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಹಾಜರಾಗಲು ಮತ್ತು ಸಂಶೋಧನಾ ಸಿಬ್ಬಂದಿಗೆ ಬೆಂಬಲ ನೀಡಲು 2 ಲಕ್ಷ ರೂ. ಗಳ ಅನುದಾನಕ್ಕಾಗಿ ವಿನಂತಿಯನ್ನು ಮಾಡಬಹುದು.

- ಮೊದಲ ಮೂರು ವರ್ಷಗಳಲ್ಲಿ ಸ್ಪರ್ಧಾತ್ಮಕ ಆಧಾರದ ಮೇಲೆ ವರ್ಷಕ್ಕೆ ಎಂಡೋಡ್ ಇನ್ವೆಸ್ಟಿಗೇಟರ್ (YI) ಪ್ರಶಸ್ತಿಗಳು ತಿಂಗಳಿಗೆ 25000  ಟಾಪ್-ಅಪ್ ವೇತನದೊಂದಿಗೆ ಇರುತ್ತವೆ ಮತ್ತು ಸಂಶೋಧನಾ ಅನುದಾನ 3 ಲಕ್ಷ ರೂ. ಗಳು ಲಭ್ಯವಿರುತ್ತದೆ. ಪ್ರತಿ YI ಪ್ರಶಸ್ತಿಯು ಎರಡು ವರ್ಷಗಳವರೆಗೆ ಇರುತ್ತದೆ.

- ಸಂಶೋಧನಾ ಯೋಜನೆಗಳು ಮತ್ತು ಸಲಹೆಗಾಗಿ ಅಗತ್ಯವಿರುವ ಉದ್ಯಮ ಮತ್ತು ಇತರ ವೃತ್ತಿಪರ ಸಂಸ್ಥೆಗಳೊಂದಿಗಿನ ಸಂವಹನಕ್ಕಾಗಿ ಸುಸಜ್ಜಿತ ಕಾರ್ಯವಿಧಾನಗಳು ಲಭ್ಯವಿರುತ್ತದೆ. ಐಐಎಸ್‌ಸಿಯಲ್ಲಿ, ಕೆಲವು ಉದ್ಯಮ ಸಂಶೋಧನಾ ಯೋಜನೆಗಳಿಗಾಗಿ ವೈಯಕ್ತಿಕ ಸಂಭಾವನೆಯನ್ನು ಸಹ ಹೊಂದಬಹುದು.
- ಸಂಸ್ಥೆಯು ಅಧ್ಯಾಪಕರ ಉದ್ಯಮಶೀಲತೆಗಾಗಿ ಮತ್ತು ಸ್ಟಾರ್ಟ್-ಅಪ್‌ಗಳಲ್ಲಿ ಅವರ ಪಾಲ್ಗೊಳ್ಳುವಿಕೆಗಾಗಿ ಅನುಕೂಲವನ್ನು ಒದಗಿಸುತ್ತದೆ.
- ಅಧ್ಯಾಪಕ ಸದಸ್ಯರಿಗೆ (ಮತ್ತು ವಿದ್ಯಾರ್ಥಿಗಳಿಗೆ) ಹಲವಾರು ಸ್ಪರ್ಧಾತ್ಮಕ ಪ್ರಯಾಣ ಅನುದಾನಗಳು ಲಭ್ಯವಿರುತ್ತದೆ.
- ಈ ಪ್ರಯಾಣದ ಅನುದಾನಗಳನ್ನು ಉನ್ನತ ಶ್ರೇಣಿಯ ಸಮ್ಮೇಳನಗಳು, ಪ್ರತಿಷ್ಠಿತ ಕಾರ್ಯಾಗಾರಗಳು ಮತ್ತು ಸಹಯೋಗದ ಸಂಶೋಧನೆಗಳಲ್ಲಿ ಪ್ರಬಂಧಗಳನ್ನು ಪ್ರಸ್ತುತಪಡಿಸಲು ನೀಡಲಾಗುತ್ತದೆ.

ಈ ಮೇಲಿನವುಗಳು ಪ್ರಮಾಣಿತ ಸೌಲಭ್ಯಗಳ ಜೊತೆಗೆ ಹೆಚ್ಚುವರಿ ಸೌಲಭ್ಯಗಳಾಗಿವೆ:

- ಪ್ರತಿ 3 ವರ್ಷಗಳ ಅವಧಿಗೆ ₹ 3 ಲಕ್ಷಗಳ ಸಂಚಿತ ವೃತ್ತಿಪರ ಅಭಿವೃದ್ಧಿ ಭತ್ಯೆ (CPDA).
- ಕ್ಯಾಂಪಸ್‌ನಲ್ಲಿ ವಸತಿ ಅನುಕೂಲ.
- ಕನಿಷ್ಠ ಎರಡು ವರ್ಷಗಳ ಕಾಲ ಸಂಸ್ಥೆಯಲ್ಲಿ ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟರೆ, ₹ 5,00,000ದ ವರೆಗೆ ಪ್ರಯಾಣ ಮತ್ತು ಸ್ಥಳಾಂತರ ವೆಚ್ಚದ ಮರುಪಾವತಿ (ವಿದೇಶದಿಂದ ಸ್ಥಳಾಂತರಗೊಂಡರೆ) ಅಥವಾ ₹ 1,25,000ದ ವರೆಗೆ ಪ್ರಯಾಣ ಮತ್ತು ಸ್ಥಳಾಂತರ ವೆಚ್ಚದ ಮರುಪಾವತಿ (ಭಾರತದೊಳಗೆ ಸ್ಥಳಾಂತರಗೊಂಡರೆ).
- ತಾಂತ್ರಿಕ ರಾಜೀನಾಮೆಯ ಸಂದರ್ಭದಲ್ಲಿ, ಪ್ರಯಾಣ ಮತ್ತು ಸ್ಥಳಾಂತರದ ವೆಚ್ಚಗಳು ಅಥವಾ ವಾಸ್ತವಿಕ ವೆಚ್ಚಗಳು, ಯಾವುದು ಕಡಿಮೆಯೋ ಅದರ ವೆಚ್ಚಗಳಿಗಾಗಿ ನೀಡುವ ಮರುಪಾವತಿಯು ದಿನಾಂಕ 13.07.2017 ರ O.M. ಸಂಖ್ಯೆ 19030/1/2017 E.IV ರ ಪ್ರಕಾರ ಸ್ವಯಂ, ಸಂಗಾತಿ ಮತ್ತು ಮಕ್ಕಳ ಪ್ರಯಾಣ/ಸ್ಥಳಾಂತರದ ವೆಚ್ಚಗಳನ್ನು ಪೂರೈಸಲು (ಇಬ್ಬರಿಗೆ ಸೀಮಿತವಾಗಿರುತ್ತದೆ) ರಸೀದಿಗಳನ್ನು ಹಾಜರುಪಡಿಸುವುದಕ್ಕೆ ಒಳಪಟ್ಟಿರುತ್ತದೆ.

### ಹೆಚ್ಚುವರಿ ಮಾಹಿತಿ

- ✓ ಸೂಕ್ತವೆಂದು ಕಂಡುಬರುವ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯುವ ಮತ್ತು ಪರೀಕ್ಷಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಅರ್ಹತೆಯ ಕನಿಷ್ಟ ಮಾನದಂಡಗಳನ್ನು ಪೂರೈಸುವುದರಿಂದ ಸಂದರ್ಶನಕ್ಕೆ ಕರೆಯಲು ಅರ್ಹರೆಂದು ಪರಿಗಣಿಸಲಾಗುವುದಿಲ್ಲ.
- ✓ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಅರ್ಜಿದಾರರು ತಮ್ಮ ಅರ್ಜಿಯನ್ನು ಸರಿಯಾದ ಚಾನೆಲ್ ಮೂಲಕ ಕಳುಹಿಸಬೇಕು ಅಥವಾ ಸಂದರ್ಶನಕ್ಕೆ ಕರೆದಾಗ ಸಂದರ್ಶನದ ಸಮಯದಲ್ಲಿ ತಮ್ಮ ಉದ್ಯೋಗದಾತರಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ನೀಡಬೇಕು.

✓ ಭಾರತದೊಳಗಿನ ಯಾವುದೇ ಸ್ಥಳದಿಂದ ಸಂದರ್ಶನಕ್ಕೆ ಹಾಜರಾಗಲು ಪ್ರಯಾಣ ವೆಚ್ಚವನ್ನು ಇನ್‌ಸ್ಟಿಟ್ಯೂಟ್ ನಿಯಮಗಳ ಪ್ರಕಾರ ಮರುಪಾವತಿಸಲಾಗುವುದು.

✓ ಅರ್ಜಿಯಲ್ಲಿ ಒದಗಿಸಲಾದ ಮಾಹಿತಿಗೆ ಅಭ್ಯರ್ಥಿಯು ಜವಾಬ್ದಾರನಾಗಿರುತ್ತಾನೆ. ಅರ್ಜಿಯಲ್ಲಿ ನೀಡಲಾದ ಯಾವುದೇ ಮಾಹಿತಿಯು ತಪ್ಪೆಂದು ನಂತರ ಕಂಡುಬಂದಲ್ಲಿ ಅಂತಹ ಅರ್ಜಿಯನ್ನು ರದ್ದುಗೊಳಿಸಲಾಗುವುದು ಅಥವಾ ಉಮೇದುವಾರಿಕೆಯನ್ನು ಕೊನೆಗೊಳಿಸಲಾಗುವುದು.

✓ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ತಮ್ಮ ಆದ್ಯತೆಯ ವಿಭಾಗಗಳು ಅಥವಾ ಕೇಂದ್ರಗಳ ಅಧ್ಯಕ್ಷರನ್ನು ಸಂಪರ್ಕಿಸಲು ಪ್ರೋತ್ಸಾಹಿಸಲಾಗಿದೆ.

**ಅರ್ಜಿ ಸಲ್ಲಿಸುವ ಬಗೆ:**

ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಲು ಅರ್ಜಿದಾರರು https://recruitment.iisc.ac.in/SpecialDrive/ ಗೆ ಲಾಗ್ ಇನ್ ಆಗಬೇಕು. ಅರ್ಜಿದಾರರು ಅಸ್ತಿತ್ವದಲ್ಲಿರುವ "ಪ್ರಕ್ರಿಯೆಯಲ್ಲಿ" ಅರ್ಜಿಯನ್ನು ಹೊಂದಿದ್ದರೆ, ಅರ್ಜಿದಾರರು ಅದನ್ನು ಹಿಂಪಡೆಯಬಹುದು ಮತ್ತು ಮತ್ತೆ ಅರ್ಜಿ ಸಲ್ಲಿಸಬಹುದು. ಪ್ರತಿ ಅರ್ಜಿದಾರರಿಗೆ ಒಂದು "ಪ್ರಕ್ರಿಯೆಯಲ್ಲಿದೆ" ಅಪ್ಲಿಕೇಶನ್ ಅನ್ನು ಮಾತ್ರ ಅನುಮತಿಸಲಾಗಿದೆ. ಪೋರ್ಟಲ್ನಲ್ಲಿ ಸೂಚಿಸಿದಂತೆ, ಕೆಳಗೆ ಸೂಚಿಸಿದ ಡಾಕ್ಯುಮೆಂಟ್‌ಗಳು (ಪಿಡಿಎಫ್ ರೂಪದಲ್ಲಿ) ಅರ್ಜಿ ನಮೂನೆಯೊಂದಿಗೆ ಅಪ್‌ಲೋಡ್ ಮಾಡಲು ಅಗತ್ಯವಿದೆ.

- ಬಯೋಡೇಟಾದೊಂದಿಗೆ ಪ್ರಕಟಗೊಂಡಿರುವ ಎಲ್ಲಾ ಲೇಖನಗಳ ಪಟ್ಟಿ.
- ಅರ್ಜಿದಾರರಿಂದ ಪ್ರಕಟಗೊಂಡಿರುವ 5 ಆಯ್ದ ಲೇಖನಗಳು.
- ಸಂಶೋಧನಾ ಯೋಜನೆಯ ವಿವರ. ಸಂಶೋಧನಾ ಯೋಜನೆಯು ಪ್ರಯೋಗಾಲಯದ ಸ್ಥಳಾವಕಾಶ ಮತ್ತು ಅವಶ್ಯಕ ಸಲಕರಣೆಗಳ ಅಂದಾಜು ವೆಚ್ಚವನ್ನು (ಪ್ರಯೋಗಾಲಯದ ತಯಾರಿಗಾಗಿ ತಗಲುವ ಯಾವುದೇ ವೆಚ್ಚ) ಒಳಗೊಂಡಿರಬೇಕು.
- ಪದವಿಪೂರ್ವ ಮತ್ತು ಸ್ನಾತಕೋತ್ತರ ಹಂತಗಳ ಬೋಧನಾ ಯೋಜನೆ.
- ಭಾರತ ಸರ್ಕಾರ ನಿಯಮಗಳ ಪ್ರಕಾರ ಅನ್ವಯವಾಗುವಂತೆ ಸಕ್ಷಮ ಪ್ರಾಧಿಕಾರದಿಂದ ಇತ್ತೀಚಿನ ಜಾತಿ ಮತ್ತು/ಅಥವಾ ಅಂಗವೈಕಲ್ಯ ಪ್ರಮಾಣಪತ್ರ.
- ಅರ್ಜಿದಾರರು ನೀಡಲು ಬಯಸುವ ಯಾವುದೇ ಇತರ ಸಂಬಂಧಿತ ಮಾಹಿತಿ.

ಕುಲಪತಿಗಳು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು 560012, ಭಾರತ
Phone: +91-80-22932444/22932440
Email: registrar@iisc.ac.in with a CC to recruitment.council@iisc.ac.in

ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಬೇಕು:
https://recruitment.iisc.ac.in/SpecialDrive/